# ಅಧ್ಯಯನಕ್ಕೆ ಪೂರಕ ಅಂಶಗಳು-2

ಸ್ವಾಮಿ ಧರ್ಮವ್ರತಾನಂದ

## ಅವಿಶ್ವಾಸ ಮತ್ತು ಅತಿಯಾದ ಆತ್ಮವಿಶ್ವಾಸ

ತಮ್ಮಲ್ಲಿ ತಮಗೆ ನಂಬಿಕೆಯಿರುವುದು ಅತಿಮುಖ್ಯ. ಆದರೆ ಅದೇ ಅತಿಯಾದ ಆತ್ಮವಿಶ್ವಾಸದಿಂದ ನಮ್ಮನ್ನು ನಾವು ತಪ್ಪಾಗಿ ತಿಳಿದುಕೊಂಡು ದಾರಿತಪ್ಪುವ ಅವಕಾಶಗಳುಂಟು. 'ನಾನೆಲ್ಲ ಓದಿದ್ದೇನೆ, ನನಗೆಲ್ಲಾ ತಿಳಿದಿದೆ, ನಾನೇನು ಕಡಿಮೆಯಲ್ಲ' ಎಂಬ ಅಹಂಕಾರದ ಮನೋಭಾವನೆ ಅತಿವಿಶ್ವಾಸದ ಒಂದು ಮುಖ. ಎಚ್ಚರಿಕೆ. ಓದಿದ್ದನ್ನೇ ಮತ್ತೆ ಮತ್ತೆ ಓದುವುದು ಒಳ್ಳೆಯದೆ. ಇದರಿಂದ ವಿಷಯಗಳು ಸರಿಯಾಗಿ ಅರ್ಥವಾಗುತ್ತವೆ. ಎಲ್ಲವನ್ನೂ ತಿಳಿದವರು ಈ ಜಗತ್ತಿನಲ್ಲಿ ಯಾರೂ ಇಲ್ಲ.

ಹಾಗೆಯೇ, 'ನನ್ನಲ್ಲಿ ಅಗಾಧವಾದ ಶಕ್ತಿಯಿದೆ, ನಾನು ಏನನ್ನು ಬೇಕಾದರೂ ಸಾಧಿಸಬಲ್ಲೆ' ಎಂಬ ನಂಬಿಕೆಯಿರಲಿ. ಜೊತೆಗೆ ವಿನಯವೂ ಇರಲಿ. ಇದೇ ನಮ್ಮ ಯಶಸ್ಸಿಗೆ ಕೀಲೆಣ್ಣೆಯಂತೆ ಕಾರ್ಯವೆಸಗುವುದು. **'ವಿದ್ಯಾ ದದಾತಿ ವಿನಯಂ'** ಎನ್ನುವಂತೆ, ವಿನಯವೂ ವಿದ್ಯೆಯನ್ನು ನೀಡುತ್ತದೆ. ತಿಳಿದವರ ಬಳಿ ವಿನಯದಿಂದ ಇದ್ದಾಗ ಅವರು ತಮಗೆ ತಿಳಿದ ವಿದ್ಯೆಯನ್ನು ಹೇಳಿಕೊಡುವರು. ಇದರಿಂದ ನಮಗೇ ಒಳ್ಳೆಯದಾಗುತ್ತದೆ ವಿನಃ ಇತರರಿಗಲ್ಲ.

ಈ ಶತ್ರುಗಳನ್ನು ಗೆಲ್ಲುವುದು ಹೇಗೆಂದು ನೋಡೋಣ. ಹಾಗಾದರೆ ಗೆಲ್ಲುವುದಕ್ಕೆ ಬೇಕಾಗಿರುವ ಅಸ್ತ್ರ-ಶಸ್ತ್ರಗಳೇನು?

ನಮ್ಮ ಮನಸ್ಸಿಗಿರುವ ಸಹಜ ಗುಣಗಳೇ ಈ ಗೆಲುವನ್ನು ಸಾಧಿಸುವ ಶಸ್ತ್ರಾಸ್ತ್ರಗಳು. ಅವನ್ನು ಅರಿತರೆ ಗೆಲುವು ನಮ್ಮದೆ.

ನಮಗೆ ಬೇಕಾದಾಗ ಮಾಹಿತಿಯನ್ನು ಮನಸ್ಸಿನಿಂದ ಹೊರತೆಗೆಯುವುದೇ ನಿಜವಾದ ಜ್ಞಾಪಕ ಶಕ್ತಿ. ಹಾಗೆ ಆಗದೆ ಇರುವುದನ್ನೇ ಮರೆತು ಹೋಗುವುದು ಎನ್ನುತಾರೆ. ಮರೆತು ಹೋಗುವುದು ಕಾಯಿಲೆಯಲ್ಲ. ಭಯದಿಂದ, ಆತಂಕದಿಂದ ತಮಸ್ಸಿನಿಂದ ಮೆದುಳು ಕೆಲಸ ಮಾಡದೆ, ತಾನು ಕಲೆಹಾಕಿದ ಮಾಹಿತಿಯನ್ನು ಹೊರಹಾಕದು. ಸಾಮಾನ್ಯವಾಗಿ ಪರೀಕ್ಷಾ ಕೊಠಡಿಯಲ್ಲಿ ಭಯದಿಂದ ಮತ್ತು ಆತ್ಮವಿಶ್ವಾಸದ ಕೊರತೆಯಿಂದ ಚೆನ್ನಾಗಿ ಓದಿದ್ದೂ ನೆನಪಿಗೆ ಬರುವುದಿಲ್ಲ. ಓದುವುದನ್ನು ನಾವು ಪ್ರೀತಿಸುವುದರಿಂದ ನಾವು ಮರೆವನ್ನು ಗೆಲ್ಲಬಹುದು. ನಾವು ಇಷ್ಟಪಡುವ ಪಠ್ಯ ವಿಷಯವನ್ನು ನಾವು ಮರೆಯುವುದಿಲ್ಲ ಮತ್ತು ನಾವು ಪ್ರೀತಿಸುವ ಉಪಾಧ್ಯಾಯರನ್ನೂ ಅವರು ಹೇಳಿದ ಅನೇಕ ಪಠ್ಯೇತರ ವಿಚಾರಗಳನ್ನೂ ನಾವು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳುತ್ತೇವೆ. ಈ ಕಾರಣದಿಂದ ನಾವು ಆ ಪಠ್ಯವಿಷಯವನ್ನು ಪ್ರೀತಿಸುತ್ತೇವೆ, ಅಷ್ಟೆ.

ಮನಸ್ಸು ತನಗೆ ಬೇಕು ಎಂದು ಬಯಸಿದ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳುತ್ತದೆ. ನಿಮಗೆ ಇಷ್ಟವಾದ ವಿಷಯ ಬಹಳ ವರ್ಷವಾದರೂ ನೆನಪಿನಲ್ಲಿರುತ್ತದೆ. ಒಳ್ಳೆಯ ಅಂಕ ಬಯಸುವ ವಿದ್ಯಾರ್ಥಿ ವರ್ಷವಿಡೀ ಕೇವಲ ಓದಿಗೆ ಮಹತ್ವವನ್ನು ನೀಡಬೇಕು. ಮನಸ್ಸು ಮನೋರಂಜನೆಗೆ ಒತ್ತನ್ನು ನೀಡುತ್ತದೆ. ನಾವು ವಿದ್ಯೆಯನ್ನು ಅಭ್ಯಾಸ ಮಾಡುತ್ತಿರುವವರಾದ್ದರಿಂದ, ನಾವು ಹಿಂದೆಯೇ ನೋಡಿದಂತೆ ಅದನ್ನು ಪ್ರೀತಿಸಬೇಕು ಮತ್ತು ನಮ್ಮ ಮನಸ್ಸಿಗೆ ಅದನ್ನೇ ಇಷ್ಟಪಡುವಂತೆ ಹೇಳಬೇಕು. ಮತ್ತೆ ಮತ್ತೆ ಹೇಳಿದರೆ ನಮ್ಮ ಮನಸ್ಸು ನಮ್ಮ ಮಾತನ್ನು ಕೇಳುತ್ತದೆ.

ಸಾಧ್ಯವಾದಷ್ಟು ಉಪಾಧ್ಯಾಯರ ಹತ್ತಿರದಲ್ಲಿ ಕುಳಿತುಕೊಳ್ಳಿ. ಇದರಿಂದ ನಾವು ಅವರ ಮಾತುಗಳನ್ನು ಸರಿಯಾಗಿ ಕೇಳಿಸಿಕೊಳ್ಳಬಹುದು. ಮತ್ತೊಂದು ಅಂಶ, ಪ್ರತಿಯೊಬ್ಬರಿಗೂ ಈ ಅವಕಾಶ ಸಿಗದು ಎಂಬುದು ಸತ್ಯ. ಆದರೆ ಉಪಾಧ್ಯಾಯರ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳುವುದು ಮುಖ್ಯ ಅಷ್ಟೇ. ಇದರಿಂದ ಮತ್ತು ಅನೇಕ ಮುಖ್ಯ ವಿಷಯಗಳನ್ನು ಪರಿಶೀಲಿಸುವುದರಿಂದ ನಾವು ಕಲಿಯಬಲ್ಲೆವು. ನಾವು



ಹಿಂದೆಯೇ ಕಂಡಂತೆ, ಭಾರತೀಯ ಮಾದರಿಯ ವಿದ್ಯಾಭ್ಯಾಸದಲ್ಲಿ ಶ್ರವಣ, ಮನನ ಮತ್ತು ನಿದಿಧ್ಯಾಸನವೆಂಬ ಮೂರು ಮುಖ್ಯಾಂಶಗಳಿವೆ. ಇದರಲ್ಲಿ ಮೊದಲನೆಯದೇ ಗಮನವಿಟ್ಟು ಕೇಳುವುದು. ಅದು ಗುರುಗಳು ಪಾಠ ಮಾಡುವ ಸಮಯದಲ್ಲಿಯೇ ಮಾಡಬೇಕಾದ ಕೆಲಸ. ತರಗತಿಯಲ್ಲಿ ಶ್ರದ್ಧೆ ಮತ್ತು ಏಕಾಗ್ರತೆಯಿಂದ ಕೇಳುವುದರಿಂದಲೇ ಸುಮಾರು ಶೇಕಡ ೬೦ ರಿಂದ ೭೦ ರಷ್ಟು ಅಂಕವನ್ನು ಗಳಿಸಬಹುದು. **'ಶ್ರದ್ಧಾವಾನ್ ಲಭತೇ ಜ್ಞಾನಮ್'**. ಅಂದರೆ ಶ್ರದ್ಧಾವಂತನಿಗೆ ವಿದ್ಯೆಯು ಒಲಿಯುತ್ತದೆ. ತರಗತಿಯಲ್ಲಿ ಕೇಳದ್ದನ್ನೇ ಮತ್ತೆ ಕೇಳಲು ಹೆಚ್ಚಿನ ಹಣ ಮತ್ತು ಸಮಯವನ್ನು ಮತ್ತೊಂದೆಡೆ ಕೊಡುವುದನ್ನು ತಪ್ಪಿಸಬಹುದು

ಮನಸ್ಸಿನ ಮತ್ತೊಂದು ಗುಣ – ಅದು ಅರ್ಥ ಮಾಡಿಕೊಂಡಿದ್ದನ್ನು ಮರೆಯದು. ಮನಸ್ಸು ಒಂದು ಶಕ್ತಿಶಾಲಿಯಾದ ಸಾಧನ. ಅದು ಕನಸ್ಸಿನಲ್ಲಿ ಕಂಡದ್ದನ್ನೂ ಕೂಡ ಮರೆಯದು. ಒಮ್ಮೆ ಕಣ್ಣಿಗೆ ಬಿದ್ದದ್ದಾಗಲಿ, ಕಿವಿಯಲ್ಲಿ ಕೇಳಿದ್ದಾಗಲಿ, ನಾಲಿಗೆ ಮುಖಾಂತರ ಸವಿದಿದ್ದಾಗಲಿ, ಅದನ್ನು ಸಾಯುವವರೆಗೂ ಮನಸ್ಸು ತನ್ನ ಪಟಲದಲ್ಲಿ ನೆನಪಿಟ್ಟುಕೊಂಡಿರುತ್ತದೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಬೇಕಾದಾಗ ನೆನಪಿಗೆ ತಂದುಕೊಳ್ಳುವಂತೆ ಮನಸ್ಸಿಗೆ ತರಬೇತಿ ನೀಡಬೇಕು. ಮನಸ್ಸಿಗೆ ಚೆನ್ನಾಗಿ ಅರ್ಥವಾಗುವಂತೆ ನಾವು ಅಧ್ಯಯನ ಮಾಡಬೇಕು.

## ಇವರು ಮಿತ್ರರೋ ಅಥವಾ ಶತ್ರುಗಳೊ?

ಮನಸ್ಸಿನ ಕೆಲವು ಗುಣಗಳನ್ನು ನೋಡಿದೆವು. ಹಾಗೂ ಓದಿದ್ದನ್ನು ಮರೆಯದಿರಲು ನಾವು ಮಾಡಬೇಕಾದುದು ಏನು ಎಂಬುದನ್ನು ಕಲಿಯಲು ಆರಂಭಿಸಿದ್ದೇವೆ. ಮತ್ತೆ ಇತರ ಕೆಲವು ಅಂಶಗಳೂ ಕೂಡ ನಮ್ಮ ಓದಿಗೆ ಪೂರಕ ಮತ್ತು ಮಾರಕಗಳಾಗಬಹುದು. ಅಂತಹ ಕೆಲವು ವಿಷಯಗಳನ್ನು ಇಂದು ತಿಳಿದುಕೊಳ್ಳಲು ಪ್ರಯತ್ನಿಸೋಣ. ಈ ವಿಷಯಗಳು ನಮಗೆ ಅತ್ಯಾವಶ್ಯಕವಾಗಿ ಬೇಕಾದುದೇ ಆಗಿವೆ. ಆದರೆ ಅವುಗಳನ್ನು ಬಳಸಿಕೊಳ್ಳುವ ವಿಧಾನವನ್ನು ನಾವು ಮೊದಲು ತಿಳಿದುಕೊಳ್ಳಬೇಕು.

### ಸ್ನೇಹಿತರು

ನಮ್ಮ ಜೀವನದ ಒಂದು ಬಹುಮುಖ್ಯವಾದ ಅಂಗ ಈ ಸ್ನೇಹಿತರು. ಅವರಿಲ್ಲದೆ ನಾವಿಲ್ಲ. ಆದರೆ ಎಂತಹ ವ್ಯಕ್ತಿಗಳು ನಮ್ಮ ಸ್ನೇಹಿತರಾಗಬೇಕು ಎಂಬುದನ್ನು ನಾವು ಅರಿತಿರಬೇಕು. ಆಂಗ್ಲಭಾಷೆಯ ಒಂದು ಗಾದೆಯು ಹೇಳುತ್ತದೆ, 'ನೀನು ನಿನ್ನ ಸ್ನೇಹಿತರನ್ನು ತೋರಿಸು, ನೀನು ಎಂತಹವನು ಎಂಬುದನ್ನು ಹೇಳುತ್ತೇನೆ' ಎಂದು. ಅಂದರೆ ನಮ್ಮ ಸ್ನೇಹಿತರೇ ನಮ್ಮ ಹಲವು ಗುಣಗಳನ್ನು ವ್ಯಕ್ತಪಡಿಸುವ ಕನ್ನಡಿಗಳು. ನಮಗೆ ಬೇಕಾದಂತಹ ಸ್ನೇಹಿತರು ಯಾರು? ಓದುವ, ಶಿಸ್ತಿನ ಮತ್ತು ಉತ್ತಮ ಗುಣದ ವಿದ್ಯಾರ್ಥಿಗಳು ಎಲ್ಲರಿಗೂ ಸಿಗುತ್ತಾರೆ. ಅಂತಹವರೊಡನೆ ಸ್ನೇಹ ಮಾಡವುದು ಉತ್ತಮ.

ಹುಡುಗರಲ್ಲಿ ಸಾಮಾನ್ಯವಾಗಿ ೩ ರೀತಿಯ ವಿದ್ಯಾರ್ಥಿಗಳಿರುತ್ತಾರೆ:



**ಸಮಯ ಕಳೆಯಲು ಶಾಲೆಗೆ ಬರುವವರು:** ಇಂತಹವರು ತಮ್ಮನ್ನು ಮಾತ್ರವಲ್ಲದೆ ತಮ್ಮ ಸ್ನೇಹಿತರನ್ನೂ ಹಾಳುಮಾಡುತ್ತಾರೆ. ಇಂತಹವರ ವಿಚಾರದಲ್ಲಿ ಜಾಗರೂಕತೆಯಿಂದ ಇರಿ. ಇವರು ಸೋಮಾರಿಗಳು, ತುಂಟರೂ, ಜಗಳಗಂಟರೂ, ಸಮಯವನ್ನು ಹಾಳುಮಾಡುವವರೂ ಆಗಿರುತ್ತಾರೆ. ಇವರು ಮಧುರವಾಗಿ ಮಾತಾನಾಡುತ್ತಾರೆ, ತಮಾಷೆಗಳಲ್ಲೇ ತಲ್ಲೀನರಾಗಿರುತ್ತಾರೆ. ಇವರ ಬಳಿ ಇರುವಾಗ ನಮಗೆ ಆನಂದವೇನೋ ದೊರಕಬಹುದು, ಆದರೆ ಯಶಸ್ಸು ಮಾತ್ರ ಬಹು ದೂರದ ಮಾತು. ಇವರನ್ನು ಉತ್ತಮ ಹಾದಿಗೆ ತರುವುದು ಕಷ್ಟಸಾಧ್ಯ.

**ಮಧ್ಯಮ ಪಂಥಿಗಳು:** ಇವರು ತಮ್ಮ ಓದಿನಲ್ಲಿ ಅಷ್ಟೊಂದು ಗಮನವನ್ನು ಹರಿಸದೆ ಇರುವವರು. ಯಾವುದೇ ಗುರಿಯನ್ನೂ, ನಿರ್ಧಾರವನ್ನೂ ಹೊಂದಿರುವುದಿಲ್ಲದವರೂ ಆಗಿರುತ್ತಾರೆ. ಇವರೊಡನೆ ನಾವು ಸ್ನೇಹವನ್ನು ಮಾಡಿದರೆ ತಮಾಷೆ, ಆನಂದ ಮತ್ತು ಸಮಯವನ್ನು ಹಾಳಮಾಡಬಹುದಾದರೂ, ನಮ್ಮ ಜೀವನವನ್ನು ಹಾಳುಮಾಡಿಕೊಳ್ಳಬೇಕಾಗಬಹುದು. ಆದರೆ ಇವರನ್ನು ತಿದ್ದಿ ಒಂದು ಉತ್ತಮ ದಾರಿಗೆ ತರಬಹುದು.

**ಚೆನ್ನಾಗಿ ಓದುವವರು :** ನಮ್ಮ ಸ್ನೇಹಿತರಲ್ಲಿ ಚೆನ್ನಾಗಿ ಓದುವವರಿರಬೇಕು. ಅವರಲ್ಲಿ ಒಂದು ದೃಢವಾದ ಅಭಿಪ್ರಾಯ, ಗುರಿ ಮತ್ತು ಶಿಸ್ತು ಎಂಬುದು ಇರುತ್ತದೆ. ಅಂತಹ ಸ್ನೇಹಿತರು ತಮ್ಮ ಜೀವನದಲ್ಲಿ ಮೇಲು ಮೇಲಕ್ಕೆ ಏರುತ್ತಾ

ಯಶಸ್ಸನ್ನು ಪಡೆದೇ ತೀರುತ್ತಾರೆ. ಅಂತಹವರ ಸ್ನೇಹ ನಮಗೂ ಒಂದು ಮಾದರಿ ಮತ್ತು ಸ್ಫೂರ್ತಿಯಾಗುವುದರಲ್ಲಿ ಸಂದೇಹವೇ ಇಲ್ಲ. ನಮಗಿಂತ ಚೆನ್ನಾಗಿ ಓದುವವರ ಜೊತೆ ಸ್ನೇಹ ಮಾಡಿದರೆ ಅವರ ಪ್ರಭಾವ-ಸ್ಫೂರ್ತಿಯಿಂದ ನಾವೂ ಮೇಲಿನ ಹಂತಕ್ಕೆ ಹೋಗಲು ಸಾಧ್ಯವಾಗುತ್ತದೆ. ಆದರೆ ಎಲ್ಲರೂ ತಮಗಿಂತ ಚೆನ್ನಾಗಿ ಓದುವವನನ್ನು ಅರಸಲು ಸಾಧ್ಯವಿಲ್ಲ. ಆದ್ದರಿಂದ ನಾವು ಮೊದಲು ಚೆನ್ನಾಗಿ ಓದುವವರಾಗಬೇಕಾದುದು ಮುಖ್ಯ.

### ಕಾಂಪಿಟಿಷನ್

ಇಂದಿನ ದಿನಗಳಲ್ಲಿ ಕಾಂಪಿಟಿಷನ್ ಹೆಚ್ಚು. ಒಂದು ರೀತಿಯಿಂದ ಇದು ಒಳ್ಳೆಯದೇ ಆದರೂ ಅದು ಮತ್ತೊಂದು ಕಡೆಯಿಂದ ಹೆಚ್ಚು ಹೆಚ್ಚು ಓದಬೇಕೆಂಬ ಹುಚ್ಚಿನಲ್ಲಿ ನಮ್ಮ ಮನಸ್ಸು ಮತ್ತು ಆರೋಗ್ಯ ಎರಡನ್ನೂ ಹಾಳು ಮಾಡುತ್ತದೆ. ಚೆನ್ನಾಗಿ ಓದುವವರನ್ನು ಕಂಡು ಅಸೂಯೆ ಪಡುವಂತೆ ಮಾಡುತ್ತದೆ. ನಾವು ಹೆಚ್ಚು ಅಂಕ ಪಡೆಯುವವರೊಡನೆ ಸ್ನೇಹ ಗಳಿಸಬೇಕೇ ವಿನಃ ಅವರನ್ನು ನೋಡಿ ಅಸೂಯೆ ಪಡಬಾರದು. ಇನ್ನೊಬ್ಬರ ಬಗ್ಗೆ ಕೆಟ್ಟದಾಗಿ ಆಲೋಚಿಸುವುದರಿಂದ ನಮಗೇ ಕೆಡುಕಾಗುವುದಲ್ಲದೆ, ನಮ್ಮ ಓದು ಕೂಡ ಕುಂಠಿತವಾಗುತ್ತದೆ. ಈ ಹೊಟ್ಟೆಕಿಚ್ಚು ತಾನು ಹುಟ್ಟಿದ ಜಾಗವನ್ನು ಮೊದಲು ಸುಡುತ್ತದೆ.ಅಲ್ಲದೆ ಅವರ ಬಗ್ಗೆ ಅಸೂಯೆ ಪಡುವುದರಲ್ಲೇ ನಮ್ಮ ಸಮಯವೂ ವ್ಯರ್ಥವಾಗುತ್ತದೆ. ವೈಜ್ಞಾನಿಕವಾಗಿ ಹೇಳುವುದಾದರೆ ನಮ್ಮ ಅನೇಕ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಕಾರಣ ಈ ದ್ವೇಷ ಮತ್ತು ಅಸೂಯೆಗಳೇ ಆಗಿವೆ. ಶ್ರೀಕೃಷ್ಣ ಕೂಡ ಭಗವದ್ಗೀತೆಯಲ್ಲಿ ಇದನ್ನೇ ಹೇಳಿದ್ದಾನೆ. **'ಇಚ್ಛಾ ದ್ವೇಷ ಸಮುತ್ಥೇನ ದ್ವಂದ್ವಮೋಹೇನ ಭಾರತ ।'** ಅಂದರೆ ದ್ವೇಷ ಅಸೂಯೆಗಳೇ ನಮ್ಮ ನಾಶಕ್ಕೆ ಕಾರಣ ಎಂದು. ಅಂತಹವರನ್ನು ಅಭಿನಂದಿಸಿದರೆ ಸ್ನೇಹವೂ ವೃದ್ಧಿಸುವುದು ಮತ್ತು ಮನಸ್ಸೂ ಶಾಂತಗೊಳ್ಳುವುದು.


ನಾವು ಇತರರೊಂದಿಗೆ ಸ್ಪರ್ಧಿಸುವುದಕ್ಕಿಂತ, ನಮ್ಮೊಡನೆಯೇ ನಾವು ಸ್ಪರ್ಧಿಸುವುದರಿಂದ ಬಹಳ ಬೇಗನೆ ಬೆಳೆಯುತ್ತೇವೆ ಎಂಬುದನ್ನು ತಿಳಿದಿರಬೇಕು.

### ಗೌರವ ತೋರಿಸಬೇಕು

'ಬಗ್ಗಿದವನು ಬಾಳಿಯಾನು' ಎಂಬ ಮಾತಿದೆ. ಹಿರಿಯರಿಗೆ ಮತ್ತು ನಾವು ಓದಿದ ಶಾಲೆಗೆ ಗೌರವವನ್ನು ತೋರುವುದರಿಂದ ಅದರ ಬಗ್ಗೆ ಪ್ರೀತಿ ಮತ್ತು ಪೂಜ್ಯಭಾವನೆ ಬೆಳೆಯುವುದು. ಅದೊಂದು ದೇವಾಲಯ. ನಮ್ಮ ಜೀವನವನ್ನು ತಿದ್ದುವ, ಗುರಿಯನ್ನು ತೋರುವ ಸ್ಥಾನ. ಪ್ರತಿ ಶಾಲೆಯೂ ಗುರುಗಳೂ ವಿದ್ಯಾರ್ಥಿಗಳ ಶ್ರೇಯಸ್ಸಿಗಾಗಿಯೇ ಪ್ರಯತ್ನಿಸುತ್ತಾರೆ. ಗುರುಗಳು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಉತ್ತಮ ವ್ಯಕ್ತಿಯನ್ನಾಗಿ ಮಾಡಲು ಪ್ರಯತ್ನಿಸುತ್ತಾರೆ.

### ನಮ್ಮ ಆಲೋಚನೆಗಳು

ನಮ್ಮ ಆಲೋಚನೆಗಳು ಟಿ. ವಿ., ಸಿನಿಮಾಗಳ ಆಲೋಚನೆ ಬರದಂತೆ ಇರಬೇಕು. ಹಿಂದೆ ಈ ಮಾಧ್ಯಮಗಳ ಹಾವಳಿ ಇರಲಿಲ್ಲ. ಈಗ ಇವುಗಳ ಜೊತೆಗೆ ಅಂತರ್ಜಾಲ ಸೇರಿ, ಅದು



ಒಳ್ಳೆಯದೋ, ಕೆಟ್ಟದ್ದೋ ಎಂದು ತೀರ್ಮಾನಿಸಲೂ ಆಗದಂತೆ ಮಾಡಿದೆ. ಇತ್ತೀಚಿನ ಅಧ್ಯಯನದಲ್ಲಿ ತಿಳಿದು ಬಂದಿರುವುದು ಏನೆಂದರೆ ಇವುಗಳ ಹಾವಳಿಯಿಂದ ಮಕ್ಕಳ ಓದಿನ ಮೇಲೆ ಆದ ಸತ್ಪರಿಣಾಮಗಳಿಗಿಂತ ದುಷ್ಪರಿಣಾಮಗಳೇ ಅಧಿಕ ಎಂದು. ಆದ್ದರಿಂದ ಇವುಗಳನ್ನು ವಿದ್ಯಾರ್ಥಿ ಜೀವನದಲ್ಲಿ ಎಷ್ಟು ಬೇಕೋ ಅಷ್ಟು ಮಾತ್ರ ಉಪಯೋಗಿಸುವುದು ಉತ್ತಮ.

### ಬುದ್ಧಿಯನ್ನು ಉಪಯೋಗಿಸಿ

ಓದದೆ ಮೆದುಳನ್ನು ನಿಷ್ಕ್ರಿಯವಾಗಿಟ್ಟುಕೊಂಡರೆ ಅದು ಯಾವ ಕೆಲಸಕ್ಕೂ ಬಾರದೆ ಹೋಗುತ್ತದೆ. ಕುತೂಹಲದಿಂದ ಓದುವುದನ್ನು ಅಭ್ಯಾಸಮಾಡಿಕೊಂಡರೆ ಮೆದುಳು ಚುರುಕಾಗುತ್ತದೆ. ಜ್ಞಾನ, ಪಾಪ-ಪುಣ್ಯ ಮತ್ತು ಸಂಸ್ಕಾರಗಳು ಮಾತ್ರವೇ ನಮ್ಮ ಮುಂದಿನ ಜನ್ಮಕ್ಕೂ ಹರಿದು ಬರುತ್ತವೆ. ನಾವು ಸಂಪಾದಿಸಿದ ಹಣ, ಹೆಸರು, ಕೀರ್ತಿ, ಸಂಪತ್ತು, ಅಧಿಕಾರಗಳು ನಾವು ಬದುಕಿರುವವರೆಗೆ ಮಾತ್ರವೇ ಎಂಬುದನ್ನು ನೆನಪಿಡಿ. ನೀವು ನಿಮ್ಮ ಉಜ್ಜ್ವಲ ಭವಿಷ್ಯ, ನಿಮ್ಮ ಏಳ್ಗೆಗಾಗಿ ತಮ್ಮ ಸುಖವನ್ನು ತ್ಯಾಗ ಮಾಡುವ ನಿಮ್ಮ ತಂದೆ ತಾಯಿ ಮತ್ತು ನಿಮ್ಮ ಉನ್ನತಿಯನ್ನೇ ತನ್ನ ಗುರಿಯಾಗಿಟ್ಟುಕೊಂಡಿರುವ ಗುರುಗಳಿಗಾಗಿ ಚೆನ್ನಾಗಿ ಓದಿ. ❖